# ಹಿಂದೂ ಧರ್ಮದ ವಿಶ್ವಭಾವೈಕ್ಯತೆ

**ಸ್ವಾಮಿ ಅನನ್ಯಾನಂದ**

ಹಿಂದೂ ಧರ್ಮದ ಪ್ರಮುಖ ಭಾವನೆಗಳನ್ನು ಸರಳವಾಗಿ ಜನಸಾಮಾನ್ಯರಿಗೆ ತಿಳಿಸಿಕೊಡುವ ಪ್ರಯತ್ನ ಇಂದು ಅತ್ಯಗತ್ಯ. ಹಾಗಾದಾಗ ಮಾತ್ರ ಅವರಿಗೆ ನಾಡಿನ ಸಂಸ್ಕೃತಿ, ಧರ್ಮಗಳಲ್ಲಿ ಶ್ರದ್ಧೆ ಮೂಡುವುದು. ಇಂತಹ ಪ್ರಯತ್ನವನ್ನು ಮಾಡಿರುವ ಲೇಖಕರು ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ೧೯೯೩ರ ಅಕ್ಟೋಬರ್ 'ವೇದಾಂತ ಕೇಸರಿ'ಯಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದ ಲೇಖನದ ಸಂಗ್ರಹಾನುವಾದವನ್ನು ಮೈಸೂರಿನ **ಶ್ರೀಮತಿ ಮಂಗಳಮ್ಮ** ಮಾಡಿರುತ್ತಾರೆ.

"ಆಕಾಶದಿಂದ ಬೀಳುವ ಮಳೆಯ ಪ್ರತಿ ಹನಿಯೂ ಸಮುದ್ರವನ್ನೇ ಸೇರುತ್ತದೆ. ಎಲ್ಲ ದೇವರಿಗೆ ಸಲ್ಲಿಸುವ ನಮಸ್ಕಾರಗಳೂ ಒಬ್ಬ ಪರಮಾತ್ಮನಿಗೇ ಸಲ್ಲುತ್ತವೆ " ಸಂಸ್ಕೃತ ಸಾಹಿತ್ಯದಲ್ಲಿನ ಮೇಲ್ಕಂಡ ಉದಾತ್ತ ಭಾವನೆಯ ಶ್ಲೋಕ ಭಾರತೀಯರೆಲ್ಲರಿಗೂ, ವಿಶೇಷವಾಗಿ ಹಿಂದೂಗಳಿಗೆ ಮಾನ್ಯವಾಗಿರುವಂತಹುದು. ಇತಿಹಾಸಪೂರ್ವ ಪ್ರಾಚೀನತೆಯುಳ್ಳ ವೈದಿಕ ಸಾಹಿತ್ಯವು **ಏಕಂ ಸತ್ ವಿಪ್ರಾ ಬಹುಧಾ ವದಂತಿ** ಎಂದು ಮೊಟ್ಟಮೊದಲು ಘೋಷಿಸಿತು. ನಂತರ ಹಿಂದೂ ಧರ್ಮ ಹಾಗೂ ಅದರ ಸಮಗ್ರತೆಯುನ್ನು ಎತ್ತಿಹಿಡಿಯುವ ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು, "ಮನುಷ್ಯರು ಯಾವ ಯಾವ ಭಾವಗಳಿಂದ, ನನ್ನನ್ನು ಆರಾಧಿಸುತ್ತಾರೋ, ಅದೇ ಭಾವಗಳಿಂದ ಸ್ವೀಕರಿಸುತ್ತೇನೆ"; "ಪ್ರತಿಯೊಬ್ಬರೂ ಬೇರೆ ಬೇರೆ ದಾರಿಗಳಿಂದ ನನ್ನಲ್ಲಿಗೇ ಬರುತ್ತಾರೆ" ಎಂದು ಸಾರಿ ಹೇಳಿದ್ದಾನೆ. ನಾನಾ ಆಕಾರದ ದೀಪಗಳಿವೆ. ದೀಪಗಳಿಗೆಲ್ಲ ಎಣ್ಣೆ ಬತ್ತಿ ಹಾಕಿ ಹಚ್ಚಿದರೆ, ಬರುವ ಬೆಳಕು ಒಂದೇ. ಆಕಾರಗಳು ಭಿನ್ನವಾದರೇನು; ಪ್ರಕಾಶವೊಂದೇ ಎಂದು ಮಧ್ಯಯುಗೀನ ಭಕ್ತರೊಬ್ಬರು ಹಾಡಿದ್ದಾರೆ. ಕೇವಲ ನೂರೈವತ್ತು ವರ್ಷಗಳ ಹಿಂದೆಯಷ್ಟೇ ಇದೇ ಮಹಾನ್ ಸತ್ಯದ ಸಾಕಾರಮೂರ್ತಿಯಾಗಿ ಶ್ರೀರಾಮಕೃಷ್ಣರು ಅವತರಿಸಿದರು. ಎಲ್ಲ ಧರ್ಮಗಳ ವೈಶಿಷ್ಟ್ಯವನ್ನು ತಮ್ಮ ಸಾಧನೆಗಳ ಮೂಲಕ ಸಾಕ್ಷಾತ್ಕರಿಸಿಕೊಂಡು "ಎಷ್ಟು ಮತಗಳೋ ಅಷ್ಟು ಪಥಗಳು"; "ಎಲ್ಲ ಧರ್ಮಗಳ ಗುರಿಯೂ ಕೊನೆಯಲ್ಲಿ ಒಬ್ಬನೇ ಭಗವಂತನನ್ನು ಸೇರುವುದೇ ಆಗಿದೆ" ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಈ ಸಾರ್ವತ್ರಿಕ ಸತ್ಯವೇ ಹಿಂದೂ ಧರ್ಮದ ಮೂಲಭೂತ ಸಿದ್ಧಾಂತ.

ಭಾರತದಂತಹ ದೇಶದ ಜನಜೀವನ ಹಾಗೂ ಮನೋಭಾವನೆಗಳ ಕುರಿತು ಯೋಚಿಸುವಾಗ, ಮುಖ್ಯವಾಗಿ ಎರಡು ವಿಷಯಗಳ ಕಡೆ ಗಮನವಿಡಬೇಕು. ಭಾರತ ದೇಶದ ವಿಸ್ತೀರ್ಣ ಹಾಗೂ ಜನಸಂಖ್ಯೆ ಮತ್ತು ಸಾವಿರಾರು ವರ್ಷಗಳ ಚರಿತ್ರೆಯ ಘಟನೆಗಳು. ಭಾರತದ ವಿವಿಧ ಪ್ರಾಂತಗಳ ಸಾಂಸ್ಕೃತಿಕ ಜೀವನ, ಭಾಷೆ, ರೀತಿ-ನೀತಿ, ಆಹಾರ, ಉಡುಗೆ-ತೊಡುಗೆ ಇವುಗಳಲ್ಲೆಲ್ಲ ಆಶ್ಚರ್ಯಕರ ರೀತಿಯ ವೈವಿಧ್ಯಗಳಿವೆ. ಭೌಗೋಳಿಕವಾಗಿಯೂ ಈ ವಿಶಾಲ ಭಾರತದ ವಾಯುಗುಣ, ನದಿ-ಪರ್ವತಗಳು, ವನಸ್ಪತಿ-ಅರಣ್ಯಗಳು, ಸಮತಟ್ಟು ಪ್ರದೇಶಗಳ ಅಗಣಿತ ವೈವಿಧ್ಯತೆಯ ವೈಭವಗಳು, ಮುಂತಾದ ಕಾರಣಗಳು ಸಾವಿರಾರು ವರ್ಷಗಳ ಜನಜೀವನದ ಮೇಲೆ ಪ್ರಭಾವವನ್ನು ಬೀರಿವೆ. ಪ್ರಸ್ತುತ ನಮ್ಮ ಜನಸಂಖ್ಯೆ ೧೦೦ ಕೋಟಿಗೂ ಮೀರಿದೆ. ಉತ್ತರದಿಂದ ದಕ್ಷಿಣದವರೆಗೆ ಸುಮಾರು ೩,೦೦೦ ಕಿ.ಮೀ. ಉದ್ದ, ಪೂರ್ವಪಶ್ಚಿಮವಾಗಿ ಸುಮಾರು ೩,೦೦೦ ಕಿ.ಮೀ. ಅಗಲವಿದ್ದರೂ, ಭಾರತದ ವೈವಿಧ್ಯತೆಗಳ ಅಂತರಾಳದಲ್ಲಿ ಒಂದು ಮೌಲಿಕ ಏಕತೆ ದೇಶದಾದ್ಯಂತ ಸಂಪೂರ್ಣವಾಗಿ ಹರಡಿದೆ.

ಭಾರತೀಯರ ಜೀವಸ್ರೋತವಾಗಿರುವ ಹಿಂದೂ ಧರ್ಮದ ಬಗ್ಗೆ ತಿಳಿಯುವುದು ಸೂಕ್ತ. ಭಾರತದ ಪ್ರಾಚೀನ ಸಾಹಿತ್ಯದಲ್ಲಿ 'ಹಿಂದೂ ಧರ್ಮ'ಕ್ಕೆ ಸಮಾನಾರ್ಥಕವಾದ ಶಬ್ದ ಎಲ್ಲೂ ಸಿಗುವುದಿಲ್ಲ. 'ಸನಾತನ ಧರ್ಮ' ಹಾಗು 'ವೈದಿಕ ಧರ್ಮ' ಎಂಬ ಶಬ್ದಗಳ ಪ್ರಯೋಗವಿದೆ. 'ಸಿಂಧೂ' ನದಿಯ ಅಪಭ್ರಂಶ ರೂಪ 'ಹಿಂದೂ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

ಜಗತ್ತಿನಲ್ಲಿ ಪ್ರಸ್ತುತ ಪ್ರಚಲಿತವಿರುವ ಪ್ರಮುಖ ಪ್ರಾಚೀನ ಧರ್ಮಗಳಲ್ಲಿ ಹಿಂದೂ ಧರ್ಮವೂ ಒಂದು. ಹಿಂದೂ ಧರ್ಮದ ಉಗಮವನ್ನು ಕುರಿತು ಯಾವುದೇ ಐತಿಹಾಸಿಕ ಪ್ರಮಾಣಗಳಿಲ್ಲ. ಬೌದ್ಧ, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳಂತೆ ಹಿಂದೂ ಧರ್ಮ ಯಾವುದೇ ಅವತಾರ ಪುರುಷ ಅಥವಾ ಒಬ್ಬ ಧರ್ಮಾಚಾರ್ಯರ ಬೋಧನೆಗಳ ಆಧಾರದ ಮೇಲೆ ನಿಂತಿಲ್ಲ. ಆದ್ದರಿಂದಲೇ ಹಿಂದೂ ಧರ್ಮವನ್ನು ಅಪೌರುಷೇಯವೆನ್ನುವುದು. ಇದು ಯಾವುದೇ ವ್ಯಕ್ತಿಯ ವಿಶೇಷ ಬೋಧನೆಗೆ ಒಳಪಟ್ಟಿಲ್ಲ. ಸರ್ವೋಚ್ಚ ಪ್ರಮಾಣಗಳೆಂದು ಪರಿಗಣಿಸುವ ವೇದವಾಙ್ಮಯವನ್ನು ಹಿಂದೂ ಧರ್ಮ ಆಧರಿಸಿದೆ. ಪರಂಪರಾನುಗತವಾಗಿ ಕಂಠಪಾಠದ ಮೂಲಕ ಉಳಿದುಕೊಂಡು ಬಂದಿರುವ ವೇದಗಳು ಅತ್ಯಂತ ಪ್ರಾಚೀನ ಸಾಹಿತ್ಯ. ಹಿಂದೂಗಳಿಗೆ ವೇದಗಳೇ ಸರ್ವಶ್ರೇಷ್ಠ ಪ್ರಮಾಣಗ್ರಂಥಗಳು.

ವಿಪುಲವಾಗಿರುವ ವೈದಿಕ ಸಾಹಿತ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗವಾದ

'ಸಂಹಿತೆ' ವೇದಗಳ ಕಾಲದ ದೇವತೆಗಳ ಸ್ತೋತ್ರಗಳನ್ನೊಳಗೊಂಡಿದೆ. ಎರಡನೆಯದಾದ 'ಬ್ರಾಹ್ಮಣ'ದಲ್ಲಿ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಕರ್ಮಕಾಂಡ ಮತ್ತು ಯಾಗ, ಯಜ್ಞಗಳಿಗೆ ಸಂಬಂಧಿಸಿದ ವಿದ್ಯೆಗಳ ವಿಸ್ತೃತ ವರ್ಣನೆಯಿದೆ. ಮೂರನೆಯ ಭಾಗ 'ಆರಣ್ಯಕ'ದಲ್ಲಿ ಕಥೆಗಳ ಮೂಲಕ ಅದೇ ಕರ್ಮಕಾಂಡಗಳ ಹಾಗೂ ವಿಧಿ-ವಿಧಾನಗಳ ಆಧ್ಯಾತ್ಮಿಕ ಅರ್ಥಗಳ ಪ್ರತಿಪಾದನೆ ಇದೆ. ನಾಲ್ಕನೆಯ ಭಾಗವಾದ 'ವೇದಾಂತ' ವೇದಗಳ ಕೊನೆಯ ಭಾಗ. ವೈದಿಕ ಧರ್ಮ ಹಾಗೂ ದರ್ಶನಗಳ ಸಾರತತ್ತ್ವವನ್ನು ಒಳಗೊಂಡಿರುವ ಈ ಭಾಗವನ್ನು 'ಉಪನಿಷತ್' ಎಂದೂ ಕರೆಯುತ್ತಾರೆ. ಹಿಂದೂ ಧರ್ಮದ ಅತ್ಯಂತ ಜಗತ್ಪ್ರಸಿದ್ಧವಾದ ಗ್ರಂಥ ಉಪನಿಷತ್ತಿನ ಬೋಧನೆಯ ಸಾರವಾದ 'ಶ್ರೀಮದ್ಭಗವದ್ಗೀತೆ'. ಭಾರತದ, ವಿಶೇಷವಾಗಿ ಆಧುನಿಕ ಭಾರತದ ಆಧ್ಯಾತ್ಮಿಕ ನಿರ್ಮಾಣವು ಭಗವದ್ಗೀತೆಯ ತಳಹದಿಯ ಮೇಲೆ ಆಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಇಸ್ಲಾಂ ಅಥವಾ ಕ್ರೈಸ್ತ ಧರ್ಮದಂತೆ ಹಿಂದೂ ಧರ್ಮವು ಒಂದೇ ಸಂಪ್ರದಾಯವಲ್ಲ. ಜೀವನದ ಹಿನ್ನೆಲೆಯಲ್ಲಿರುವ ಮೂಲ ಸತ್ಯ ಅಥವಾ ಭಗವಂತನ ಬಳಿಸಾರುವ ವಿಧವಿಧವಾದ ಮಾರ್ಗಗಳ ಸಮ್ಮೇಳನವೇ ಹಿಂದೂ ಧರ್ಮ. ಅದು ಯಾವುದೇ ಒಂದು ಧಾರ್ಮಿಕ ಸಂಪ್ರದಾಯದ ಅಂಧಾನುಕರಣೆಯಲ್ಲ ಅಥವಾ ಜನರನ್ನು ಯಾವುದೇ ಒಂದು ಧಾರ್ಮಿಕ ಸಂಪ್ರದಾಯದಂತೆ ನಡೆಯಲು ಒತ್ತಾಯ ಪಡಿಸುವ ದುರಾಗ್ರಹಿಯೂ ಅಲ್ಲ. ಮೊದಲೇ ಹೇಳಿದಂತೆ ಹಿಂದೂ ಧರ್ಮವು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಭಿನ್ನ ಭಿನ್ನ ಮಾರ್ಗಗಳ ಆವಶ್ಯಕತೆಯನ್ನು ಒಪ್ಪುತ್ತದೆ ಮತ್ತು ಗೌರವಿಸುತ್ತದೆ. ಸಮಗ್ರ ವಿಶ್ವದೃಷ್ಟಿಯ ಹಿಂದೂ ಧರ್ಮದಲ್ಲಿ ನೋಡುವವರಿಗೆ ಅನೇಕ ವಿರೋಧಾಭಾಸಗಳೂ, ಅಸಂಗತಗಳೂ ಮೇಲ್ನೋಟದಲ್ಲಿ ಕಾಣಿಸಬಹುದು. ಭಾರತದ ಎಲ್ಲ ಧಾರ್ಮಿಕ ಸಂಪ್ರದಾಯಗಳ ಹಾಗೂ ಶಾಖೋಪಶಾಖೆಗಳ ಮೂಲದಲ್ಲಿ ಆಧ್ಯಾತ್ಮಿಕ ಭಾವನೆ ಸ್ಪಷ್ಟವಾಗಿ ಕಂಡುಬರುತ್ತದೆ. ಈ ವಿಷಯದಲ್ಲಿ ಡಾ.ರಾಧಾಕೃಷ್ಣನ್ ಅವರ ಮಹತ್ವಪೂರ್ಣ ಹೇಳಿಕೆ ಹೀಗಿದೆ: "ಆಧ್ಯಾತ್ಮಿಕ ಜೀವನದ ಗುರಿಯ ಮೇಲಿನ ಪ್ರಾಮುಖ್ಯವೇ ವಿಭಿನ್ನ ಪಂಗಡಗಳ ಆರಾಧಕರನ್ನು ಒಂದುಗೂಡಿಸಿ ಆಧ್ಯಾತ್ಮಿಕ ಪ್ರತಿಸ್ಪರ್ಧೆಯಿಂದ ಹಿಂದೂ ಧರ್ಮವನ್ನು ಕಾಪಾಡಿತು."

ಪರಮಸತ್ಯವು ಸಾಕಾರ ಹಾಗೂ ನಿರಾಕಾರ ಎಂದು ಹಿಂದೂ ಧರ್ಮವು ಒಪ್ಪುತ್ತದೆ. ಅದು ಕೇವಲ ನಿರ್ಗುಣ ನಿರಾಕಾರ ಮಾತ್ರವಲ್ಲ, ಮಾನವನಿಗೆ ಆಪ್ಯಾಯಮಾನವಾಗುವಂತೆ ದಿವ್ಯರೂಪಗಳನ್ನೂ ಹೊಂದಬಲ್ಲದು. ಭಗವಂತನು ತನ್ನ ಪಡಿಯಚ್ಚಿನಲ್ಲಿ ಮನುಷ್ಯನನ್ನು ಸೃಷ್ಟಿಸಿದ ಎಂಬುದು ಎಷ್ಟು ಸತ್ಯವೋ ಮನುಷ್ಯನೂ ಭಗವಂತನನ್ನು ತನ್ನಂತೆ ರೂಪಿಸಿದ ಎಂಬುದೂ ಸತ್ಯ. ಮನುಷ್ಯ ಭಗವಂತನಿಗೆ ಮಾನವಾಕೃತಿ ನೀಡಿ ಎಲ್ಲ ಉತ್ತಮ ಗುಣವುಳ್ಳವನನ್ನಾಗಿಯೂ, ಬಿರುದುಗಳುಳ್ಳವನನ್ನಾಗಿಯೂ ಭಾವಿಸಿ ಆರಾಧಿಸುತ್ತಾನೆ. ಭಗವಂತನು ಸೌಂದರ್ಯದ ಆಕರ, ಒಳಿತಿನ ನಿಧಿ ಹಾಗೂ ಆನಂದಮಯ.

ಭಗವಂತನು ಪ್ರಕೃತಿಯ ಒಡೆಯ. ಪ್ರತಿ ಯುಗದಲ್ಲೂ ವಿಶ್ವದ ಸೃಷ್ಟಿ, ಸ್ಥಿತಿ ಹಾಗೂ ಲಯಗಳಿಗೆ ಅವನೇ ಕಾರಣ. ಒಬ್ಬನೇ ಭಗವಂತನು ಬ್ರಹ್ಮನಾಗಿ ಸೃಷ್ಟಿ, ವಿಷ್ಣುರೂಪಿಯಾಗಿ ಪಾಲನೆ, ಶಿವರೂಪದಲ್ಲಿ ಪ್ರಳಯವನ್ನು ಉಂಟುಮಾಡುತ್ತಾನೆ. ಜಗದೀಶ್ವರನ ತ್ರಿಮೂರ್ತಿ ಕಲ್ಪನೆಯನ್ನು ಹಿಂದುಗಳೆಲ್ಲರೂ ನಂಬುತ್ತಾರೆ.

ಶಿವ ಮತ್ತು ವಿಷ್ಣು ಪ್ರಾಚೀನ ಕಾಲದಿಂದಲೂ ಲಕ್ಷಾಂತರ ಹಿಂದುಗಳಿಂದ ಪೂಜಿಸಲ್ಪಡುತ್ತಿರುವ ದೇವರುಗಳು. ವಿಷ್ಣುವಿನ ಆರಾಧಕರನ್ನು ವೈಷ್ಣವರೆಂದೂ, ಶಿವನ ಆರಾಧಕರನ್ನು ಶೈವರೆಂದೂ ಹೇಳುತ್ತಾರೆ. ಈ ಎರಡೂ ಸಂಪ್ರದಾಯಗಳ ಪ್ರತ್ಯೇಕವಾದ ಸಾಹಿತ್ಯಗಳು ಶತಶತಮಾನಗಳಿಂದಲೂ ವೃದ್ಧಿ ಹೊಂದುತ್ತಿವೆ. ಈ ಎರಡು ಸಂಪ್ರದಾಯಗಳ ಜೊತೆ-ಜೊತೆಯಾಗಿ, ಅತಿ ಪುರಾತನ ಕಾಲದಿಂದ ಬೆಳೆದುಬಂದಿರುವ ಮತ್ತೊಂದು ಸಂಪ್ರದಾಯವಿದೆ. ದೇವರನ್ನು ಸ್ತ್ರೀರೂಪದಲ್ಲಿ ಆರಾಧಿಸಿ, ತಾಯಿಯೆಂದು ವಾತ್ಸಲ್ಯದಿಂದ ಕಾಣುವ ಶಕ್ತಿಯ ಉಪಾಸನೆ. ಜಗಜ್ಜನನಿಯನ್ನು ಶಕ್ತಿದೇವತೆಯ ರೂಪದಲ್ಲಿ ಆರಾಧಿಸುವವರು ಶಾಕ್ತರು. ಪ್ರಸ್ತುತ ಜನಸಾಮಾನ್ಯರಲ್ಲಿ ಶೈವ, ವೈಷ್ಣವ ಹಾಗೂ ಶಾಕ್ತ ಸಂಪ್ರದಾಯಗಳು ಮಾತ್ರ ಪ್ರಚಲಿತವಾಗಿವೆ.

ಸಜ್ಜನ ರಕ್ಷಣೆ, ದುಷ್ಕೃತ್ಯಗಳ ದಮನ ಹಾಗೂ ಧರ್ಮ ಸಂಸ್ಥಾಪನೆಗಾಗಿ ವಿಷ್ಣುವು ಭೂಲೋಕದಲ್ಲಿ ಅನೇಕ ಅವತಾರಗಳನ್ನು ತಾಳುತ್ತಾನೆ. ಈ ಅವತಾರಗಳಲ್ಲಿ ಲಕ್ಷಾಂತರ ಭಾರತೀಯರು ಪೂಜಿಸುವ ರಾಮಾವತಾರ ಮತ್ತು ಕೃಷ್ಣಾವತಾರಗಳು ಪ್ರಮುಖವಾದುವು. ವಿಷ್ಣುವಿನ ಅವತಾರಗಳಲ್ಲಿ ಬೌದ್ಧಾವತಾರವೂ ಒಂದು. ಭಗವಂತನ ಅವತಾರಗಳಿಗೆ ಸಂಖ್ಯಾಮಿತಿಯಿಲ್ಲವೆಂದು ಭಾಗವತವು ಹೇಳುತ್ತದೆ. ಧರ್ಮಗ್ಲಾನಿಯಾದಾಗ, ಅಧರ್ಮ ಹೆಚ್ಚಿದಾಗಲೆಲ್ಲ ಭಗವಂತ ಭೂಲೋಕದಲ್ಲಿ ಅವತರಿಸುತ್ತಾನೆ. ಮಾನವನನ್ನು ದುಷ್ಕಾರ್ಯಗಳಿಂದ ದೂರವಿರಿಸಲು ಹಾಗೂ ನೆಮ್ಮದಿ, ಶಾಂತಿ, ಆನಂದದ ಹರಿಕಾರನಾಗಿ. ಭಗವಂತ ಮಾನವನಾಗಿ ಇಳಿದು ಬರುವುದನ್ನೇ ಅವತಾರವೆನ್ನುತ್ತೇವೆ.

ಈ ಅವತಾರಗಳು, ದೇವಿ, ದೇವತೆಗಳೇ ಅಲ್ಲದೆ, ಭಕ್ತರು, ಋಷಿಗಳು-ಮುನಿಗಳು, ಮಹಾಪುರುಷರು, ಸಂತರುಗಳನ್ನೂ ಸಹ ದೇವದೂತರೆಂದು ಹಿಂದೂಗಳು ನಂಬುತ್ತಾರೆ. ದೇವರ

ಸಾಕ್ಷಾತ್ಕಾರ ಮಾಡಿಕೊಂಡವರು ಸಾಧಕರಿಗೆ ದಿಕ್ಸೂಚಿಯಂತೆ ಸಹಾಯ ಹಸ್ತ ನೀಡುತ್ತಾರೆ. ದೇವದೇವತೆಗಳಂತೆ ಈ ಮಹಾತ್ಮರ ಮಂದಿರಗಳೂ ಇವೆ. ಪ್ರತಿನಿತ್ಯ ನೂರಾರು–ಸಾವಿರಾರು ಭಕ್ತರು ಇವರ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಸಾಧು ಸಂತರ, ಭಕ್ತರ ವಾಸಸ್ಥಳಗಳು ಪುಣ್ಯತೀರ್ಥಗಳಷ್ಟೇ ಪೂಜನೀಯವೆಂದು ಭಾವಿಸುತ್ತಾರೆ. ತೀರ್ಥಕ್ಷೇತ್ರಗಳಿಗೆ ಯಾತ್ರೆಗಾಗಿ ಭಕ್ತಾದಿಗಳು ಶ್ರದ್ಧೆಯಿಂದ ಹೋಗುತ್ತಾರೆ. ಸಣ್ಣ ಪುಟ್ಟ, ದೊಡ್ಡ ದೊಡ್ಡ ದೇವಸ್ಥಾನಗಳಿಂದ ತುಂಬಿರುವ ಭಾರತ ದಲ್ಲಿ ಹಿಂದೂಗಳಿಗೆ ದಿನನಿತ್ಯವೂ ಪವಿತ್ರವಾದ ಭಾವನೆ ಗಳಿಂದ ಆಧ್ಯಾತ್ಮಿಕ ಪೋಷಣೆಯಾಗುತ್ತದೆ. ಭಾರತೀಯರಿಗೆ ನದಿಗಳೂ ಪವಿತ್ರ. ವಿಶೇಷ ಪರ್ವದಿನಗಳಲ್ಲಿ, ನದಿಗಳ ಸ್ನಾನದಿಂದ ಮನಶ್ಶಾಂತಿ ಹಾಗೂ ಆಧ್ಯಾತ್ಮಿಕ ಉನ್ನತಿ ಯುಂಟಾಗುತ್ತದೆಂದು ಹಿಂದೂಗಳ ನಂಬಿಕೆ. ಹಿಂದೂಗಳ ಪಂಚಾಂಗವು ವರ್ಷಪೂರ್ತಿ ವಿವಿಧ ದೇವ, ದೇವತೆಗಳ ಉಪಾಸನಾದಿಗಳಿಂದ ತುಂಬಿದೆ. ಈ ವಿಶೇಷ ದಿನಗಳಲ್ಲಿ ಉತ್ಸವಗಳನ್ನು ಆಚರಿಸುವುದರಿಂದ ಭಕ್ತರು ಉಲ್ಲಾಸ ಹಾಗೂ ಭಕ್ತಿಭಾವಗಳಿಂದ ಕೂಡಿರುತ್ತಾರೆ. ಈ ಉತ್ಸವಗಳು ಧಾರ್ಮಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಹೊಂದಿರುವುದರಿಂದ, ಭಾರತೀಯರು ಹಬ್ಬ ಹರಿದಿನಗಳನ್ನು ಉತ್ಸುಕತೆಯಿಂದ ನಿರೀಕ್ಷಿಸುತ್ತಿರುತ್ತಾರೆ.

ಹಿಂದೂ ಧರ್ಮದ ಸಾಮಾನ್ಯ ರೂಪರೇಖೆಗಳನ್ನು ಪರಿಚಯಿಸಿದ ನಂತರ ಈ ಧರ್ಮದ ವಿಭಿನ್ನ ಸಂಪ್ರ ದಾಯಗಳು, ಮಾನ್ಯಮಾಡುವ ಸರ್ವಸಾಧಾರಣ ನಂಬಿಕೆಗಳ ಬಗ್ಗೆ ಚರ್ಚಿಸುವುದು ಸೂಕ್ತ. ಹಿಂದೂಗಳ ಆಸ್ತಿಕ ದರ್ಶನ ಗಳು ಅಥವಾ ಆರು ದರ್ಶನಶಾಸ್ತ್ರಗಳು ಹಿಂದೂ ಧರ್ಮದ ಅಡಿಪಾಯ. ಈ ದರ್ಶನಶಾಸ್ತ್ರಗಳಲ್ಲಿಯೂ ತಾತ್ತ್ವಿಕ ವಿಚಾರ ಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಕೆಲವು ಮೂಲಭೂತ ಭಾವನೆಗಳಲ್ಲಿ ಐಕ್ಯತೆಯಿದೆ.

ವೇದಾಂತವನ್ನು ಹಿಂದೂ ಧರ್ಮದ ಮೇರುಶಿಖರ ವೆನ್ನಬಹುದು. ಉಪನಿಷತ್ತು ಅಥವಾ ವೇದಾಂತದ ತತ್ತ್ವಗಳಿಗೆ ಆತ್ಮಾನುಭವಿಗಳಾದ ಬ್ರಹ್ಮಜ್ಞಾನಿಗಳ ಅಪರೋಕ್ಷ ಅನುಭವಗಳ ಒತ್ತಾಸೆಯಿದೆ. ಈಶ್ವರನೊಬ್ಬ, ಅವನೇ ನಾನಾ ರೂಪಗಳಿಂದ ಎಲ್ಲ ಕಡೆಯೂ ದೃಷ್ಟಿಗೋಚರನಾಗಿದ್ದಾನೆ; ಅವನೇ ಸೃಷ್ಟಿ ಕರ್ತ, ಪಾಲಕ ಹಾಗೂ ಅಂತಿಮ ಗುರಿ. ಈಶ್ವರನು ಸರ್ವ ವ್ಯಾಪಿ, ಅವನಿಲ್ಲದ ಸ್ಥಳವಿಲ್ಲ, ಕ್ಷಣವಿಲ್ಲ. ಚರಾಚರ ವಸ್ತು ಗಳೆಲ್ಲವೂ ಇದೇ ತತ್ತ್ವದಿಂದ ಓತಪ್ರೋತವಾಗಿವೆ. ಈ ದಿವ್ಯ ಶಕ್ತಿಯ ಸರ್ವಶ್ರೇಷ್ಠ ಅಭಿವ್ಯಕ್ತಿ ಮಾನವನಲ್ಲಿ! ಪ್ರಕೃತಿಯಲ್ಲಿ ಭಿನ್ನ ಭಿನ್ನ ಸ್ತರಗಳಲ್ಲಿ ಆ ದಿವ್ಯಶಕ್ತಿಯೇ ಪ್ರಕಟವಾಗಿದೆ. ಆ ದಿವ್ಯತೆಯನ್ನೇ ಸಮಗ್ರವಾಗಿ ಮತ್ತು ಪೂರ್ಣರೂಪದಲ್ಲಿ ವ್ಯಕ್ತ ಗೊಳಿಸುವುದೇ ಜೀವನದ ಗುರಿ.

ವೇದಾಂತದ ಬೋಧನೆಯನ್ನು ಸ್ವಾಮಿ ವಿವೇಕಾನಂದರು ಸಂಕ್ಷಿಪ್ತವಾಗಿ ಅತ್ಯಂತ ಸುಂದರವಾಗಿ ತಿಳಿಸಿದ್ದಾರೆ:

- ಪ್ರತಿಯೊಂದು ಆತ್ಮವೂ ಸ್ವಭಾವತಃ ದಿವ್ಯವಾದದ್ದು.
- ಈ ಆಂತರಿಕ ದಿವ್ಯತೆಯನ್ನು ಒಳಗಿನ ಹಾಗೂ ಹೊರಗಿನ ಪ್ರಕೃತಿಯನ್ನು ನಿಯಂತ್ರಿಸುವ ಮೂಲಕ ವ್ಯಕ್ತಪಡಿಸುವುದೇ ಜೀವನದ ಗುರಿ ಆಗಬೇಕು.
- ಭಕ್ತಿಯೋಗ, ಕರ್ಮಯೋಗ, ರಾಜಯೋಗ ಮತ್ತು ಜ್ಞಾನಯೋಗಗಳ ಸಮ್ಯಕ್ ಅನುಷ್ಠಾನದಿಂದ ಇದನ್ನು ಸಾಧಿಸಬೇಕು.
- ಇವುಗಳಲ್ಲಿ ಒಂದು ಅಥವಾ ಹೆಚ್ಚಿನ ಅಥವಾ ಎಲ್ಲವನ್ನೂ ಒಟ್ಟುಗೂಡಿಸಿ ಬೇಕಾದರೂ ಪಡೆಯಬಹುದು. ಆದರೆ ಇದನ್ನು ಪಡೆದು ಮುಕ್ತನಾಗುವುದೇ ಗುರಿಯಾಗಬೇಕು. ಇದೇ ಧರ್ಮದ ಸರ್ವಸ್ವ. ಸಂಪ್ರದಾಯ, ಸಿದ್ಧಾಂತ, ಆಚಾರ, ಗ್ರಂಥ, ಗುಡಿಗೋಪುರಗಳೆಲ್ಲ ಗೌಣ."

ಈ ಕೆಲವು ವಾಕ್ಯಗಳಿಂದ ಹಿಂದೂ ಧರ್ಮದ ಧರ್ಮ ಪರಾಯಣತೆ, ದರ್ಶನ, ನೀತಿ, ಮನೋವಿಜ್ಞಾನ ಹಾಗೂ ಸಾಮಾನ್ಯ ಧ್ಯೇಯದ ಸಂಪೂರ್ಣ ಚಿತ್ರಣ ನಮಗೆ ಸಿಗುತ್ತದೆ. ಹಿಂದೂ ಧರ್ಮವು ಅನಂತ ನರಕ ಶಿಕ್ಷೆಯನ್ನು ನಂಬುವುದಿಲ್ಲ. ಸ್ವರ್ಗದಲ್ಲಿರುವ ತಂದೆಯು ಹೇಗೆ ಪೂರ್ಣನೋ, ಅಂತಹ ಪೂರ್ಣತೆಯನ್ನು ಮನುಷ್ಯನೂ ಪಡೆಯಬೇಕು ಎಂದು ಸಾರುತ್ತದೆ.

ಎಲ್ಲ ಅಸ್ತಿತ್ವವೂ ಆಧ್ಯಾತ್ಮಿಕ ಏಕತೆಯಲ್ಲಿ ನೆಲೆನಿಂತಿದೆ ಎಂದು ಹಿಂದೂ ಧರ್ಮ ಘೋಷಿಸುತ್ತದೆ. ವೇದಾಂತದ 'ಬ್ರಹ್ಮ'ವೇ ಜೀವಿಗಳಲ್ಲಿರುವ ಚೇತನ. ಎಲ್ಲ ಆತ್ಮಗಳೂ ಒಂದೇ. ವೈವಿಧ್ಯವು ಕೇವಲ ಹೊರಗಣ ಮುಸುಕಷ್ಟೆ. ಆತ್ಮಸಾಕ್ಷಾತ್ಕಾರ ವಾದಾಗ ವಿಶ್ವಚೇತನದ ಅರಿವುಂಟಾಗುತ್ತದೆ. ಪ್ರತಿ ವ್ಯಕ್ತಿಯೂ ಇಂದ್ರಿಯ ಸಂಯಮ, ಮಾನಸಿಕ ನಿಗ್ರಹ ಹಾಗೂ ಅಧ್ಯಾತ್ಮ ಸಾಧನೆಯಿಂದ ಅಂತರಂಗವನ್ನು ಶುದ್ಧಿ ಮಾಡಿಕೊಂಡು ಅಪರೋಕ್ಷ ದಿವ್ಯತೆಯನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಹಿಂದೂ ಧರ್ಮದ ಪ್ರಕಾರ ಇದೇ ನಮ್ಮೆಲ್ಲರ ಗುರಿ.

ಸತ್ಯವನ್ನು ತಲುಪಲು ಅನೇಕ ಮಾರ್ಗಗಳಿವೆಯೆಂದು ಹಿಂದೂ ಧರ್ಮ ಸಾರುತ್ತದೆ. ಅದು ಈ ಧರ್ಮಮಾರ್ಗ ಗಳನ್ನು ಒಪ್ಪುವುದು ಮಾತ್ರವಲ್ಲ, ಸ್ವಾಗತಿಸುತ್ತದೆ. ಏಕೆಂದರೆ, ಅದು ಪ್ರತಿ ವ್ಯಕ್ತಿಯ ಆವಶ್ಯಕತೆ ಬೇರೆ ಬೇರೆಯೆಂಬುದನ್ನು ಅರಿತಿದೆ. ಪ್ರತಿ ವ್ಯಕ್ತಿಯ ಇಚ್ಛೆ, ಮನೋಭಾವ, ಸಂಸ್ಕಾರ ಹಾಗೂ ಅಭಿರುಚಿ ಮುಂತಾದ ವೈವಿಧ್ಯಗಳನ್ನು ತಿಳಿದುಕೊಂಡು ಹಿಂದೂ ಧರ್ಮವು ಅವುಗಳ ಅನುಕೂಲಕ್ಕೆ ತಕ್ಕಂತೆ ದಾರಿ ಯನ್ನು ಪ್ರಶಸ್ತಗೊಳಿಸುತ್ತದೆ. ಶಾರೀರಿಕವಾಗಿ ಪ್ರತಿಯೊಬ್ಬನಲ್ಲೂ

ಹೇಗೆ ವ್ಯತ್ಯಾಸವಿದೆಯೋ ಹಾಗೆಯೇ ಆಧ್ಯಾತ್ಮಿಕ ಕ್ಷೇತ್ರದ ಪ್ರಗತಿಯಲ್ಲೂ ಬೇರೆ–ಬೇರೆ ಸ್ತರಗಳಿವೆ. ಆಧ್ಯಾತ್ಮಿಕ ಜೀವನವು ಮನುಷ್ಯನ ಅಂತರಂಗ ವಿಕಾಸಕ್ಕೆ ಸಂಬಂಧಪಟ್ಟಿದೆ. ಆದ್ದರಿಂದ ಮಾನಸಿಕ ಹಾಗೂ ಹೃದಯಗಳ ವ್ಯತ್ಯಾಸಗಳಿಗೆ ಸ್ಪಂದಿಸುವಂತೆ ಆಧ್ಯಾತ್ಮಿಕ ಮಾರ್ಗದರ್ಶನಕ್ಕೆ ನಾನಾ ವಿಧವಾದ ಧಾರ್ಮಿಕ ರೀತಿಗಳನ್ನು ಒಪ್ಪುವುದಲ್ಲದೆ, ಎಲ್ಲವೂ ಒಂದೇ ಸತ್ಯದ ಕಡೆಗೆ ಕರೆದೊಯ್ಯುತ್ತದೆಯೆಂದು ದೃಢವಾಗಿ ನಂಬುತ್ತದೆ. ಇದೇ ಹಿಂದೂ ಧರ್ಮದ ವಿಶಾಲದೃಷ್ಟಿ ಹಾಗೂ ವಿಶ್ವಭಾವೈಕ್ಯದ ವೈಶಿಷ್ಟ್ಯ. 'ಸರ್ವಧರ್ಮಸಹಿಷ್ಣುತೆ' ಎಂಬ ಶಬ್ದ ಹಿಂದೂ ಧರ್ಮದ ನಿಜವಾದ ಅರ್ಥಕ್ಕೆ ಹೊಂದುವುದಿಲ್ಲ. ವಸ್ತುತಃ ಹಿಂದೂ ಧರ್ಮದಲ್ಲಿ 'ಸರ್ವಧರ್ಮಸ್ವೀಕೃತಿ' ಇದೆ. ಎಲ್ಲ ಧರ್ಮಗಳ ಭಾವನೆ ಹಾಗೂ ಧ್ಯೇಯ 'ಈಶ್ವರನೊಬ್ಬನೇ' ಆಗಿರುವುದರಿಂದ ಹಿಂದೂ ಧರ್ಮವು ಸಂಪೂರ್ಣವಾಗಿ ಅವುಗಳನ್ನು ಒಪ್ಪುತ್ತದೆ.

ಸರ್ವಧರ್ಮಗಳ ಏಕತೆಯನ್ನು ಹಿಂದೂ ಧರ್ಮ ಮಾನ್ಯ ಮಾಡುವುದರಿಂದ ಧರ್ಮದ ಹೆಸರಿನಲ್ಲಿ ಯಾರ ಬಗ್ಗೆಯೂ ತಿರಸ್ಕಾರಕ್ಕೆ ಆಸ್ಪದವಿಲ್ಲ. ಹಿಂದೂ ಧರ್ಮದಲ್ಲಿ ಇತರ ಧರ್ಮಗಳ ಬಗ್ಗೆ ದುರಾಗ್ರಹವಾಗಲೀ, ಸಂಕುಚಿತ ಭಾವನೆಯಾಗಲೀ ಉಂಟಾಗುವಂತಹ ಬೋಧನೆಗಳಿಲ್ಲ. ಯಾವುದೇ ರೀತಿಯ ಸಂಕುಚಿತ ಮತಾಂಧತೆಯಿಲ್ಲ ಹಾಗೂ ಒಂದೇ ಸಿದ್ಧಾಂತವನ್ನು ಎಲ್ಲರೂ ಒಪ್ಪುವುದು ಆವಶ್ಯಕವೆಂದು ಎಲ್ಲೂ ಹೇಳಿಲ್ಲ. ಅದರ ಧಾರ್ಮಿಕ ಧ್ವನಿ–ಬರಹ ವಿಸ್ತಾರವಾದದ್ದು.

ಮೋಕ್ಷಸಾಧನೆಗಾಗಿ ಹಿಂದೂ ಧರ್ಮವು ಮನುಷ್ಯರ ವ್ಯಕ್ತಿತ್ವಗಳಲ್ಲಿರುವ ಭಿನ್ನ ಅಭಿರುಚಿಗಳಿಗೆ ಹೊಂದುವಂತೆ, ನಾಲ್ಕು ವಿಧವಾದ ಯೋಗಗಳನ್ನು ಪ್ರಚುರಪಡಿಸಿದೆ. ಇವೇ ಭಕ್ತಿಯೋಗ, ಕರ್ಮಯೋಗ, ರಾಜಯೋಗ, ಹಾಗೂ ಜ್ಞಾನಯೋಗ. ಇದರ ವಿಸ್ತಾರ ವರ್ಣನೆಗೆ ಇಲ್ಲಿ ಅವಕಾಶವಿಲ್ಲ, ಉಲ್ಲೇಖಿಸಿದೆಯಷ್ಟೆ. ಭಗವದ್ಗೀತೆಯಲ್ಲಿ ಈ ನಾಲ್ಕೂ ಯೋಗಗಳ ವಿಸ್ತೃತ ವಿವರಣೆ ಇದೆ. ಈ ನಾಲ್ಕೂ ಯೋಗಗಳ ಬಗ್ಗೆ, ಪ್ರತ್ಯೇಕ ಪ್ರತ್ಯೇಕವಾಗಿ ವಿಸ್ತಾರ ವ್ಯಾಖ್ಯಾನದಿಂದ ಕೂಡಿದ ಸ್ವಾಮಿ ವಿವೇಕಾನಂದರ ಪುಸ್ತಕಗಳೂ ಇವೆ.

ಹಿಂದೂ ಧರ್ಮವು ವ್ಯಾವಹಾರಿಕ ಜಗತ್ತನ್ನು ಅಲ್ಲಗಳೆಯುವುದಿಲ್ಲ. ಆಧ್ಯಾತ್ಮಿಕ ಜೀವನದ ಪ್ರಗತಿಯೊಂದಿಗೆ ದೈನಂದಿನ ಜೀವನದಲ್ಲಿಯೂ ಸಮೃದ್ಧಿ, ಶಾಂತಿ, ನೆಮ್ಮದಿಗಳನ್ನು ಸಾಧಿಸಬೇಕೆಂದು ಸೂಚಿಸುತ್ತದೆ. ಪಾರಲೌಕಿಕ ವಿಷಯದಲ್ಲಿ ಮಾತ್ರವಲ್ಲ, ಲೌಕಿಕವಾಗಿಯೂ ಹಿಂದೂ ಧಾರ್ಮಿಕನಾಗಿರುತ್ತಾನೆ. ಆದ್ದರಿಂದ ಋಷಿಗಳು ಹಿಂದೂಗಳ ಇಹಕ್ಕೂ–ಪರಕ್ಕೂ ಅನುಕೂಲವಾಗುವಂತಹ ಧರ್ಮಾಚರಣೆಯನ್ನು ತಿಳಿಸಿದ್ದಾರೆ. ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಸರಿಹೊಂದುವ ಜೀವನಕ್ರಮವು ವ್ಯಕ್ತಿಯ ವಿಕಾಸಕ್ಕೆ ಅನುವು ಮಾಡಿಕೊಡುತ್ತದೆ. ಅರ್ಥ ಹಾಗು ಕಾಮದ ವಿಷಯದಲ್ಲಿ ಸ್ವೇಚ್ಛಾಚರಣೆ, ಅತಿಯಾದ ಆಸಕ್ತಿ ಕೂಡದು. ಧರ್ಮಾರ್ಜಿತವಾದ ಸಂಪತ್ತು ಮತ್ತು ಕಾಮವೇ ಮುಕ್ತಿಪಥಕ್ಕೆ ಹಂತ. ಭೌತಿಕ, ಆರ್ಥಿಕ, ಸಾಮಾಜಿಕ ಹಾಗೂ ಇತರ ಲೌಕಿಕ ಮೌಲ್ಯಗಳ ಆಧಾರವಾಗಿ ಧರ್ಮದಿಂದೊಡಗೂಡಿದ ನೈತಿಕತೆಯಿರಬೇಕು.

ಹಿಂದೂ ಧರ್ಮದ ರೀತಿಯಂತೆ, ಧರ್ಮವು ಬದುಕುವ ರೀತಿ. ಮನುಷ್ಯನ ಆಂತರಿಕ ಬದಲಾವಣೆಗೆ ಧರ್ಮವು ಕಾರಣವಾಗಿ ಮನುಷ್ಯ ತನ್ನ ಪಾಶವೀ ಕೃತ್ಯಗಳಿಂದ ಮುಕ್ತನಾಗಬೇಕು. ಕೇವಲ ಪೂಜೆ, ಪರ್ವಕಾಲಗಳಲ್ಲಿ ನಿಯಮಿತ ಧಾರ್ಮಿಕ ಆಚರಣೆಗಳಿಂದ ಗುರಿ ತಲುಪುವುದು ಅಸಾಧ್ಯ. ಜೀವನದ ಪ್ರತಿಕ್ಷಣದಲ್ಲೂ ಜಾಗ್ರತೆಯಿಂದ ಪ್ರಯತ್ನಪೂರ್ವಕವಾಗಿ, ಧರ್ಮಮಾರ್ಗದಲ್ಲಿ ನಡೆದಾಗ ಮಾತ್ರ, ಧರ್ಮದ ಅಂತಿಮ ಗುರಿ, ಆಂತರಿಕ ಶಾಂತಿ, ಸುಖಜೀವನವನ್ನು ಪಡೆಯಲು ಸಾಧ್ಯ. ಅದಕ್ಕಾಗಿಯೇ ಹಿಂದುವು ತನ್ನ ದೈನಿಕ ಜೀವನದಲ್ಲಿ ಧರ್ಮಾಚರಣೆಯ ಅಭ್ಯಾಸಗಳಾದ ಸಂಧ್ಯಾವಂದನೆ, ಧ್ಯಾನ, ಪೂಜೆ, ಮಂತ್ರಜಪ, ಭಗವನ್ನಾಮ ಸ್ಮರಣೆ, ದೇವಾಲಯ ದರ್ಶನ, ತೀರ್ಥಯಾತ್ರೆ, ಪವಿತ್ರನದಿಗಳ ಸ್ನಾನ, ಶಾಸ್ತ್ರ–ಪುರಾಣ–ಕಥಾಶ್ರವಣ, ಭಗವನ್ನಾಮ ಸಂಕೀರ್ತನೆ, ಸಾಧು–ಸಂತರ, ಅವತಾರಪುರುಷರ ಜೀವನ ಚರಿತ್ರೆಗಳ ಶ್ರವಣ–ಪಠಣ, ಸ್ತುತಿ ಸ್ತೋತ್ರಗಳನ್ನು ಹಾಡುವುದು, ಕೇಳುವುದು, ದಾನ, ವ್ರತ, ಉಪವಾಸ, ಹಬ್ಬ, ಹರಿದಿನಗಳ ಆಚರಣೆ ಇತ್ಯಾದಿ ಅನುಷ್ಠಾನಗಳಲ್ಲಿ ತೊಡಗುತ್ತಾನೆ. ಇವುಗಳೆಲ್ಲ ಮನುಷ್ಯನ ಧಾರ್ಮಿಕ ಪ್ರಗತಿಗೆ ಒತ್ತು ನೀಡುತ್ತವೆ. ಮನಸ್ಸು ನಿರ್ಮಲವಾಗಲು ಇವುಗಳ ಆವಶ್ಯಕತೆ ಇದೆ. ನಿರ್ಮಲಾತ್ಮನಾದವನೇ ಆಧ್ಯಾತ್ಮಿಕ ಆನಂದ ಹಾಗೂ ಭಗವಂತನ ಕೃಪೆಯನ್ನು ಅನುಭವಿಸುತ್ತಾನೆ.

ಅತ್ಯಂತ ಪ್ರಾಚೀನವಾದ ಉಪನಿಷತ್ತಿನ ಒಂದು ಮಂತ್ರದ ಅಭಿಪ್ರಾಯ ಹೀಗಿದೆ: "ಜಗತ್ತೆಲ್ಲವೂ ಈಶ್ವರನಿಂದ ವ್ಯಾಪ್ತವಾಗಿದೆ." ಕೇವಲ ಹೊರ ಜಗತ್ತು ಮಾತ್ರವಲ್ಲ, ಅವನು ಪ್ರತಿ ಕಣಕಣವನ್ನೂ ವ್ಯಾಪಿಸಿದ್ದಾನೆ. ಈಶ್ವರನೇ ಸಕಲವೂ ಆಗಿದ್ದಾನೆ. ಇದು ಹಿಂದುಗಳ ಜಗತ್ಸಂಬಂಧಿತವಾದ ನಂಬಿಕೆ. ಪಿಂಡಾಂಡ ಮತ್ತು ಬ್ರಹ್ಮಾಂಡಗಳು ಒಂದೇ ಸತ್ಯದಿಂದ ಕೂಡಿವೆ. ಉಪನಿಷತ್ತು ಸಾರುವ ಈ ಸತ್ಯವು ಹಿಂದೂ ಧರ್ಮ ಅಥವಾ ವೇದಾಂತದ ಮೇರುದಂಡವಾಗಿದೆ. ಈ ಮಂತ್ರದ ಬಗ್ಗೆ ಮಹಾತ್ಮಾ ಗಾಂಧಿಜೀಯವರು "ಒಂದು ವೇಳೆ

ಅಕಸ್ಮಾತ್ತಾಗಿ ಹಿಂದೂ ಧರ್ಮಶಾಸ್ತ್ರ ಹಾಗೂ ಉಪನಿಷತ್ತುಗಳೆಲ್ಲ ಭಸ್ಮೀಭೂತವಾಗಿ ಹೋದರೂ ಈಶೋಪನಿಷತ್ತಿನ ಈ ಮೊದಲನೇ ಮಂತ್ರ ಹಿಂದುಗಳ ಸ್ಮೃತಿಪಟಲದಲ್ಲಿ ಉಳಿದರೆ ಹಿಂದೂ ಧರ್ಮ ಅನಂತಕಾಲ ಬದುಕಿರುತ್ತದೆ" ಎಂದಿದ್ದಾರೆ.

ಎಲ್ಲ ಜೀವಜಗತ್ತೂ ಪವಿತ್ರವಾದರೂ ಮಾನವಜನ್ಮಕ್ಕಿಂತ ಶ್ರೇಷ್ಠವಾದದ್ದು ಮತ್ತೊಂದಿಲ್ಲ. ಮನುಷ್ಯನಲ್ಲಿ ದೈವಿಕಾಂಶದ ಅಭಿವ್ಯಕ್ತಿ ಅಧಿಕವಾಗಿದೆ. ಅವನು ಈಶ್ವರನಿಗೆ ಅತ್ಯಂತ ಸಮೀಪದವನು. ಈ ದುರ್ಲಭ ಜೀವನವನ್ನು ವ್ಯರ್ಥಗೊಳಿಸಬಾರದು. ಇದರ ಸದುಪಯೋಗ ಶ್ರೇಯಸ್ಕರ. ಆಧ್ಯಾತ್ಮಿಕತೆಯ ಪೂರ್ಣತೆಯನ್ನು ಹೊಂದಲು, ಮಾನವಶರೀರವೇ ಅಧಿಕ ಸಮರ್ಥವೆಂಬುದು ಸತ್ಯ. ಈ ಶರೀರವೇ ಒಂದು ದೇವಾಲಯ; ಇದರಲ್ಲಿ ದಿವ್ಯವೂ, ಪವಿತ್ರವೂ ಆದ ಆತ್ಮ ನೆಲೆಸಿದ್ದಾನೆ. ಈ ಜನ್ಮದಲ್ಲಿಯೇ ಈ ಶರೀರವನ್ನು ಸಾಧನವಾಗಿಸಿಕೊಂಡು ಮುಕ್ತನಾಗುತ್ತೇನೆ ಎಂಬ ದೃಢ ವಿಶ್ವಾಸ ವ್ಯಕ್ತಿಯಲ್ಲಿ ಇರಬೇಕು ಎಂದು ಹಿಂದೂಧರ್ಮ ಹೇಳುತ್ತದೆ.

ಧರ್ಮವೇ ಭಾರತೀಯರ ಪಾಲಿಗೆ ಆಧಾರಸ್ತಂಭ. ಭಾರತವು ಋಷಿ–ಮುನಿಗಳ, ಸಾಧುಸಂತರ, ಭಕ್ತರ ಜೀವನ ಚರಿತ್ರೆಗಳಿಂದ ಸಮೃದ್ಧವಾದ ದೇಶ. ಪ್ರತಿ ಯುಗದಲ್ಲೂ, ಪ್ರತಿ ಪೀಳಿಗೆಯಲ್ಲೂ, ಧರ್ಮ ಮತ್ತು ಸತ್ಯಮಾರ್ಗದಲ್ಲಿ ನಡೆಯಲು ಎಲ್ಲರಿಗೂ ಮಾರ್ಗದರ್ಶಕರಾಗಿ, ಮಹಾಪುರುಷರು ಅವತರಿಸಿದ್ದಾರೆ. ಪ್ರಾಚೀನ ಋಷಿ–ಮುನಿಗಳ ಮೂಲಕ ಲಭಿಸಿರುವ ಸಂಪದ್ಭರಿತ ಆತ್ಮವಿದ್ಯೆ ಇದು. ಪ್ರತಿಯೊಬ್ಬ ಭಾರತೀಯನಿಗೂ ಇದು ಹೆಮ್ಮೆಯ ವಿಷಯ. ಇದರ ವೈಶಾಲ್ಯವನ್ನು ಸುರಕ್ಷಿತವಾಗಿಡಲು, ತನ್ನ ಅನುಭವದಿಂದ ಈ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವುದು ಪ್ರತಿ ಹಿಂದೂವಿನ ಪರಮ ಕರ್ತವ್ಯವಾಗಿದೆ. ✪

---

## ಪ್ರಹಸನ ಪ್ರಸಂಗ

ಒಬ್ಬ ವ್ಯಕ್ತಿಯ ಕಿವಿ ಸದಾ ಕುಯ್‌ಗುಡುತ್ತಿತ್ತು, ಕಣ್ಣು ಕೆಂಪಗೆ ಊದುಕೊಂಡಿರುತ್ತಿತ್ತು ಹಾಗೂ ಮುಖವೂ ಕೆಂಪಾಗಿ ಕೆರಳಿರುತ್ತಿತ್ತು. ಮೂರು ವರ್ಷಗಳ ಕಾಲ ಸತತವಾಗಿ ಪೀಡೆಯನ್ನು ಅನುಭವಿಸಿ, ಆ ಡಾಕ್ಟರ್, ಈ ಡಾಕ್ಟರ್ ಅಂತ ಅಲೆದ. ಒಬ್ಬ ಡಾಕ್ಟರ್ ಟಾನ್ಸಲ್ ಕಿತ್ತುಹಾಕಿದ, ಮತ್ತೊಬ್ಬ ಅಪೆಂಡಿಕ್ಸ್ ಕಿತ್ತ, ಮಗದೊಬ್ಬ ಎಲ್ಲ ಹಲ್ಲುಗಳನ್ನೂ ತೆಗೆದು ಹಾಕಿದ. ದಾರಿಗಾಣದೆ ವಿದೇಶಕ್ಕೂ ಹೋಗಿ ಕುರಿಯ ಗ್ರಂಥಿಯನ್ನು ಅಳವಡಿಸಿಕೊಂಡು ಬಂದ! ಆದರೂ ಪರಿಹಾರವಾಗಲಿಲ್ಲ. ಕಡೆಗೆ ಒಬ್ಬ ಡಾಕ್ಟರ್ ಹೇಳಿದ, "ಇನ್ನು ಯಾವುದೇ ಉಪಾಯವಿಲ್ಲ. ಕೇವಲ ಆರು ತಿಂಗಳಿದೆ ಇನ್ನು."

ಬಡಪಾಯಿ ಕೆಲಸವನ್ನು ಬಿಟ್ಟು, ತನ್ನೆಲ್ಲ ಬಂಧುಗಳಿಗೂ ವರ್ತಮಾನ ಕೊಟ್ಟು, ತಲೆಕೆಡಿಸಿಕೊಂಡ. ಉಳಿದ ದಿನಗಳನ್ನಾದರೂ ಸುಖವಾಗಿ ಜೀವಿಸಲು ನಿರ್ಧರಿಸಿದ. ಒಳ್ಳೆಯ ಒಂದು ಕೋಟನ್ನು ಹೊಲಿಸಲು ದರ್ಜಿಯ ಬಳಿಗೆ ಹೋದ. ದರ್ಜಿ ಅಳತೆ ಬರೆದುಕೊಳ್ಳಲು ಪ್ರಾರಂಭಿಸಿದ: ಕುತ್ತಿಗೆಯ ಅಳತೆ 16½ ತಕ್ಷಣ ಈತ ಹೇಳಿದ, "ಇಲ್ಲ 15½ ಇರಬೇಕು. ಸರಿಯಾಗಿ ನೋಡಿ." ದರ್ಜಿ ಮತ್ತೊಮ್ಮೆ ಅಳೆದು "16½ನೇ ಸರಿ" ಎಂದ. "ಇಲ್ಲ. ನಾನು ಯಾವಾಗಲೂ 15½ ಕುತ್ತಿಗೆ ಅಳತೆಯ ಕೋಟನ್ನೇ ಹಾಕುವುದು," ಎಂದು ಈತ ವಾದಿಸಿದ. ದರ್ಜಿ ಹೇಳಿದ, "ಸರಿ, ನಿಮ್ಮಿಚ್ಛೆಯಂತೆ ಆಗಲಿ. ಆದರೆ ಆಮೇಲೆ ಬಂದು ಕಿವಿಯಲ್ಲಿ ಶಬ್ದ ಆಗುತ್ತಿದೆ, ಕಣ್ಣು ಊದಿಕೊಂಡಿದೆ, ಮುಖವೆಲ್ಲ ಕೆರಳುತ್ತಿದೆ ಎಂದು ಸುಮ್ಮನೆ ತಗಾದೆ ತೆಗೆಯಬೇಡಿ!"

* * *

ಪರೀಕ್ಷೆಗೆ ಹೋಗಬೇಕಿದ್ದ ವಿದ್ಯಾರ್ಥಿಯೊಬ್ಬ ಗಾಬರಿಯಾಗಿದ್ದ. ಪರೀಕ್ಷೆಯಲ್ಲಿ ವಾಚಿಕ ಹಾಗೂ ಲಿಖಿತ ಭಾಗಗಳಿದ್ದವು. ಲಿಖಿತ ಪರೀಕ್ಷೆಯ ಬಗ್ಗೆ ಹೆಚ್ಚು ಚಿಂತೆಯಿಲ್ಲದಿದ್ದರೂ ವಾಚಿಕದಲ್ಲಿ ಏನು ಪ್ರಶ್ನೆ ಕೇಳಿಬಿಡುವರೋ, ಯಾರು ಇರುತ್ತಾರೋ ಎಂಬ ಆತಂಕವಿತ್ತು. ತನ್ನ ಸ್ನೇಹಿತರ ಸಲಹೆಯನ್ನು ಕೇಳಿದ. "ಏನೂ ಹೆದರಬೇಡ. ಪ್ರಶ್ನೆ ಕೇಳಿದಾಗ ನಿನಗೆ ಉತ್ತರ ಗೊತ್ತಿಲ್ಲ ಎಂದೂ ತೋರಿಸಿಕೊಳ್ಳಬೇಡ. ಎಷ್ಟು ಗೊತ್ತಿದೆಯೋ ಅಷ್ಟನ್ನು ಧೈರ್ಯವಾಗಿ, ಒಳ್ಳೆಯ ಅಭಿಪ್ರಾಯ ಬರುವಂತೆ ಹೇಳಬೇಕು. ವಿಷಯ ಗೊತ್ತಿರುವಂತೆ ನಟಿಸಬೇಕು" ಎಂದು ಸ್ನೇಹಿತರು ಧೈರ್ಯವಿತ್ತರು.

ಈತ ಪರೀಕ್ಷೆಯ ಕೊಠಡಿಯೊಳಗೆ ಬಂದೊಡನೆ ಒಬ್ಬ ಪರೀಕ್ಷಕ ಇವನಿಗೆ ಗೊತ್ತಿಲ್ಲದ ವಿಜ್ಞಾನದ ಒಂದು ಕಠಿಣವಾದ ಪ್ರಶ್ನೆಯನ್ನೇ ಕೇಳಿಬಿಟ್ಟ. ಇವನು ಭಯಪಡದೆ, ಮುಖದಲ್ಲಿ ಆತಂಕ ತೋರ್ಪಡಿಸದೆ ಹೇಳಿದ, "ಸಾರಿ, ನನಗೆ ಇದರ ಉತ್ತರ ಗೊತ್ತಿದೆ. ಆದರೆ ಈ ಕ್ಷಣ ಅದು ನೆನಪಾಗುತ್ತಿಲ್ಲ."

ಪರೀಕ್ಷಕ ನಗುತ್ತ ಹೇಳಿದ, "ಎಂತಹ ದುರಂತ! ಈ ಪ್ರಶ್ನೆಗೆ ಉತ್ತರ ಕಂಡುಹಿಡಿಯಲು ಎರಡು ಸಾವಿರ ವರ್ಷಗಳಿಂದ ನೂರಾರು ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ!"

* * *